ಮಾತುಗಳ ನಡುವೆ ಮೌನವಾಗಿ ಕೈಹಿಡಿದು ಕೂರುತ್ತಿದ್ದ.

ಈಗ ಜಾತ್ರೆಯೆಂದರೆ ಜುಗುಪ್ಸೆ. ಈ ಸದ್ದು, ಅಷ್ಟೊಂದು ಜನ, ಆ ಅಂಗಡಿಗಳು, ತಿಂಡಿಯ ವಾಸನೆ ಸಹಿಸಲಾರೆ ಎಂಬ ಮೊಗ ಮಾಡಿ ಜಾತ್ರೆಗೆ ಬಾರದೇ ಹತ್ತು ವರ್ಷಗಳನ್ನೇ ಕಳೆದಿದ್ದಾನೆ. ಕಾರಣ ಜಾತ್ರೆಯ ವಾತಾವರಣವಾ ಅಥವಾ ಅವಳಿಲ್ಲದ್ದೂ ಜಾತ್ರೆಯಾ ಎಂಬ ಭಾವವಾ? ಅವನಂತೂ ಉತ್ತರಿಸಲಾರ.

ಮತ್ಯಾವುದೋ ಕ್ಷಣದಲ್ಲೇ ಒಂದು ಘಮ ಸುಳಿದಂತಾಯಿತು. 'ಓಹ್, ಇದು ಅವಳದೇ ಸುಗಂಧ. ಅವಳೇ ಇಷ್ಟಪಟ್ಟು ಬಳಸುತ್ತಿದ್ದ ಪರ್ಫ್ಯೂಮ್. ಅವಳು ಇಲ್ಲೇ ಎಲ್ಲೋ ಇದ್ದಾಳೆ' ಅಶೋಕ ಹೇಳಿಕೊಂಡ. ಸುತ್ತ ನೋಡಿದ. ಜನಜಾತ್ರೆಯಲ್ಲಿ ಅವಳೆಲ್ಲಿ ಕಾಣುತ್ತಾಳೆ?

ಅರ್ಧ ಗಂಟೆಯಾಗುವಷ್ಟರಲ್ಲಿ ದಿವಾಕರನಿಗೆ ಎದ್ದು ಹೊರಡುವ ಮನಸ್ಸಾಯಿತು. 'ಅಶೋಕ ಹೋಗಣ್ವಾ? ತೆಪ್ಪೋತ್ಸವ ಮುಗಿದ ಮೇಲೆ ರಥಬೀದಿಯಲ್ಲಿ ರಶ್ ಆಗತ್ತೆ. ಕಾಲು ಇಡೋಕೇ ಆಗಲ್ಲ. ಈಗಲೇ ಹೋದರೆ ಒಳ್ಳೆಯದು, ಹಾಗೇ ಏನಾದ್ರೂ ತಿಂದು ಹೊರಡೋಣ' ಎಂದ. ಅಶೋಕನಿಗೂ ಅದೇ ಬೇಕಿತ್ತು.

ಇಬ್ಬರೂ ಹೊರಟರು. ರಾಮಮಂದಿರದ ಬಳಿ ಬಂದು ಪ್ರಸಾದ ಪಡೆದು ನಡೆದು ಬರುವಷ್ಟರಲ್ಲಿ ದೋಸೆ ಕ್ಯಾಂಪ್ ಕಾಣಿಸಿತು. ಇಬ್ಬರೂ ಹೊಕ್ಕರು. ದೋಸೆ ತಿಂದು ಹೊರಡುವಷ್ಟರಲ್ಲಿ ತೆಪ್ಪೋತ್ಸವ ಮುಗಿದು ಜನರು ಜಾತ್ರೆಯ ಬೀದಿಗೆ ಬರಲು ಆರಂಭಿಸಿದ್ದರು. ಎಲ್ಲಿದ್ದರೋ ಇದುವರೆಗೆ ಎನ್ನುವಷ್ಟು ಜನರು. ಕ್ಷಣಮಾತ್ರದಲ್ಲಿ ಹೋಟೆಲು ತುಂಬಿ ತುಳುಕಿತು. ಇವರು ತಿಂದ ತಟ್ಟೆಯನ್ನು ಬುಟ್ಟಿಗೆ ಹಾಕಿ ತಿರುಗುವಷ್ಟರಲ್ಲಿ, 'ಎರಡು ಮಸಾಲೆ ದೋಸೆ, ಒಂದಕ್ಕೆ ಕೆಂಪು ಚಟ್ನಿ ಜಾಸ್ತಿ ಹಚ್ಚಿ' ಎಂಬ ಧ್ವನಿ. ದಿಗ್ಭ್ರಮೆಗೊಂಡು ತಿರುಗಿ ನೋಡಿದ. ನೋಡಿಯೇ ನೋಡಿದ. ದೇವಯಾನಿ! ಮೊಬೈಲಿನಿಂದ ಸ್ಕ್ಯಾನ್ ಮಾಡುತ್ತಿದ್ದಳು.

'ದಿವ್ಯಾ. ನೋಡು, ದೇವ.ಯಾನಿ'

'ಅರೇ, ಹೌದಲ್ಲೋ. ಅವಳೇ ತಾನೆ ಅದು. ಅಷ್ಟೊಂದು ದಪ್ಪ ಆಗಿದಾಳೆ'

'ಧ್ವನಿ ಹಾಗೆಯೇ ಇದೆ' ಅಶೋಕನೆಂದ.

ದೋಸೆ ಪ್ಲೇಟು ಹಿಡಿದು ಗೆಳತಿಯೊಂದಿಗೆ ಬಂದು ಕುರ್ಚಿ ಹುಡುಕುವ ಹೊತ್ತಿಗೆ ಅವಳಿಗೂ ಅಶೋಕನ ದರ್ಶನವಾಯಿತು.

ಮುಖದಲ್ಲಿ ನೂರು ಭಾವಗಳು. ಜೊತೆಗಿದ್ದ ಗೆಳತಿಗೆ ಬದಲಾದ ಚಿತ್ರ ಕಾಣಬಾರದು. 'ಹಾಯ್' ಎಂದಳು. 'ಹಲೋ' ಎಂದ. 'ನನ್ನ ಫ್ರೆಂಡ್ ನಳಿನಿ' ಪರಿಚಯಿಸಿದಳು.

'ನಾನು ನೆನಪಿದೀನಲ್ವಾ, ದಿವಾಕರ' ಅಶೋಕನಿಗೆ ಮಾತಾಡಲು ಏನೂ ತೋಚಲಿಲ್ಲ.

'ಮತ್ತೆ, ಆರಾಮ? ಜಾತ್ರೆಗೆ ಬಂದಿದ್ದಾ? ಜನ ಜೋರು ಅಲ್ವಾ?' ಅವಳೇ ಮಾತಾಡಿದಳು. ಕೈಯಲ್ಲಿ ಜಾತ್ರೆಯಲ್ಲಿ ಕೊಂಡ ವಸ್ತುಗಳ ಚೀಲವಿತ್ತು. 'ಚೂರು ಹಿಡ್ಕೋ, ಕೂರ್ತೀನಿ ಫಸ್ಟು' ಎಂದಳು. ಇವನು ಚೀಲ ಹಿಡಿದು ನಿಂತ. ಆಗಲೂ ಹೀಗೇ, ಅವಳಿಗೆ ಬೇಕಾದುದೆಲ್ಲವನ್ನೂ ಕೊಡಿಸಿ, ಅವಳ ಕೈಹಿಡಿದು, ಕೊಡಿಸಿದ ಎಲ್ಲವನ್ನೂ ಇವನೇ ಹಿಡಿದುಕೊಂಡು ಜಾತ್ರೆಯಲ್ಲಿ ಜನಗಳ ನಡುವೆ ಪ್ರಪಂಚವನ್ನೇ ಮರೆತು ನಡೆಯುತ್ತಿದ್ದ. ಆ ದಿನಗಳು ಮತ್ತೆ ನೆನಪಾಯಿತು.

'ನಾನಂತೂ ಇಷ್ಟು ವರ್ಷಗಳಲ್ಲಿ ಒಂದು ಬಾರಿಯೂ ಬರೋದನ್ನು ತಪ್ಪಿಸಿಲ್ಲಪ್ಪ, ಯಾವುದನ್ನು ಮಿಸ್ ಮಾಡಿದರೂ ಈ ಜಾತ್ರೆಯನ್ನು ಮಾತ್ರಾ ಮಿಸ್ ಮಾಡಲ್ಲ. ದೋಸೆ ಸಖತ್ತಾಗಿದೆ ಅಲ್ವಾ? ವೆರಿ ಟೇಸ್ಟಿ' ಮಾತಾಡುತ್ತಲೇ ಇದ್ದಳು.

'ಹತ್ತು ವರ್ಷಗಳ ಹಿಂದೆ ಹೇಗಿದ್ದಳೋ, ಈಗಲೂ ಹಾಗೆಯೇ ಇದ್ದಾಳೆ. ತಿನ್ನೋದು, ಮಾತಾಡೋದು, ಕಂಡಿದ್ದನ್ನು ಕೊಳ್ಳೋದು ಎಲ್ಲದೂ ಹಾಗೆಯೇ ಇದೆ. ಅದೇ ಉತ್ಸಾಹ. ಆದರೆ ತಾನು? ಅವಳನ್ನು ಕಳೆದುಕೊಂಡ ದಿನದಿಂದ ಎಲ್ಲವನ್ನೂ ಕಳೆದುಕೊಂಡಂತಾಗಿದೀನಿ. ಯಾವುದರಲ್ಲೂ ಉತ್ಸಾಹ ಇಲ್ಲ. ತಾನು ಅವಳನ್ನು ಕಳೆದುಕೊಂಡ ಹಾಗೆ ಅವಳೂ ತನ್ನನ್ನು ಕಳ್ಕೊಂಡಿದಾಳೆ, ಆದರೂ ಬದುಕಿನಲ್ಲಿ ಏನೂ ಆಗದ ಹಾಗೆ ಇದ್ದಾಳೆ' ಅಶೋಕನ ಯೋಚನೆ ಹೀಗೆ.

'ಹೇಳು ಅಶೋಕ, ಹೇಗಿದೀಯ? ಜೀವನ ಹೇಗಿದೆ? ನಿನಗೇನು ಬಿಡಪ್ಪ, ಒಳ್ಳೆಯ ಕೆಲಸ ಇದೆ. ಮನೆ ಆಸ್ತಿ ಇದೆ. ಇನ್ನೇನು ಚಿಂತೆ?' ನಕ್ಕಳು.

'ಹಾಂ ಕಣೇ. ಚನ್ನಾಗಿದೀನಿ. ಮತ್ತೆ ನೀನು?'

'ಆರಾಮಾಗಿದೀನಿ ನೋಡು' ಅಷ್ಟರಲ್ಲಿ ನಳಿನಿಗೊಂದು ಕರೆ ಬಂತು, ಎದ್ದಳು.

'ರಾಯಲ್ಲಾಗಿದೀನಿ ಕಣೋ, ಗಂಡ, ಎರಡು ಮಕ್ಕಳು. ಬಾಂಬೆಯಲ್ಲಿ ಇದೀನಿ. ವರ್ಷಕ್ಕೊಮ್ಮೆ ಇಲ್ಲಿಗೆ ಬರ್ತೀನಿ. ಗಂಡ ಚನ್ನಾಗಿ ನೋಡ್ಕೋತಾನೆ. ಮಕ್ಕಳು ಶಾಲೆಗೆ ಹೋಗ್ತಾರೆ. ಅತ್ತೆ ಮಾವ ಬಂಧು ಬಳಗ ಅನ್ನೋ ರಗಳೆ ಇಲ್ಲ. ಇಂಡಿಪೆಂಡೆಂಟ್ ಲೈಫು. ಖರ್ಚು ಮಾಡುವಷ್ಟು ಹಣ ಕೊಡ್ತಾನೆ ಗಂಡ. ಯಾವುದಕ್ಕೂ ಅಡ್ಡಿ ಮಾಡಲ್ಲ. ಎಲ್ಲಿಗೆ ಹೋದ್ರೂ ಕೇಳಲ್ಲ. ಯಾಕೆ ಮಾಡ್ದೆ ಅನ್ನಲ್ಲ, ಬಿಂದಾಸಾಗಿ ಇದೀನಿ' ಎಂದಳು.

'ಹೌದಾ, ಹಾಗೇ ಖುಷಿಯಾಗಿರು' ಎಂದ.

'ನಿನ್ನದೇನು ಕತೆ? ಹೆಂಡತಿ ಏನು ಮಾಡ್ತಾಳೆ? ಎಷ್ಟು ಮಕ್ಕಳು?'

'ನನ್ನ ಹೆಂಡತಿ. ಹಾ. ಹೌಸ್ ವೈಫ್ ಅವಳು. ನನಗೂ ಇಬ್ಬರು ಮಕ್ಕಳು. ಮಗಳು ಭೂಮಿ, ಮಗ ವರುಣ. ಶಾಲೆಗೆ ಹೋಗ್ತಾರೆ. ಲೈಫ್ ಚನಾಗಿದೆ. ಅಪ್ಪ ಅಮ್ಮ ಹೋಗಿಬಿಟ್ರು. ಮೂರು ವರ್ಷ ಆಯ್ತು. ಹೆಂಡತಿ ತುಂಬಾ ಒಳ್ಳೆಯವಳು. ಅರ್ಥ ಮಾಡ್ಕೊತಾಳೆ. ಖುಷಿಯಾಗಿದೀನಿ ಕಣೇ.'

'ಹೌದಾ. ಹೀಗೇ ಖುಷಿಯಾಗಿರು. ಮತ್ತೆ, ಜಾತ್ರೆಯಲ್ಲಿ ಏನು ತಗೊಂಡೆ? ಕೈಯಲ್ಲಿ ಏನೂ ಇಲ್ಲ. ಹೆಂಡತಿ ಮಕ್ಕಳಿಗೆ ಏನೂ ತಗೊಂಡಿಲ್ವಾ?'

'ಈಗ ತಗೋಬೇಕು. ಅವಳಿಗೆ ಜುಮುಕಿ' ಮುಂದೆ ಮಾತಾಡಲಾಗದೇ ನಿಲ್ಲಿಸಿದ.

'ಹಾಗೇ ಇದೀಯ ಕಣೋ. ಚೂರೂ ದಪ್ಪ ಆಗಿಲ್ಲ. ಹೊಟ್ಟೆ ಬಂದಿಲ್ಲ. ತಿನ್ನೋದೇ ಇಲ್ವಾ ನೀನು? ಫುಲ್ ಡಯಟ್ಟಾ? ಅಥವಾ ಹೆಂಡತಿಗೆ ಅಡುಗೆ ಮಾಡೋಕೆ ಬರಲ್ವಾ?'

ಪಟಪಟನೆ ಮಾತು. ಅಗಲವಾದ ಕಣ್ಣುಗಳನ್ನು ಮತ್ತಷ್ಟು ಅರಳಿಸುತ್ತಾಳೆ.

'ಇಲ್ವೆ, ಹಾಗೇನಿಲ್ಲ. ಅವಳು ರುಚಿಯಾಗಿ ಅಡುಗೆ ಮಾಡ್ತಾಳೆ. ನಾನೇ ಸ್ವಲ್ಪ ಕಾನ್ಷಿಯಸ್ ಅಷ್ಟೇ. ನೀನೇನು ಇಷ್ಟು ದಪ್ಪ ಆಗಿದೀಯ?' ಅವಳ ಸಣಕಲು ದೇಹ ಈಗ ತುಸು ಹೆಚ್ಚಾಗಿಯೇ ದಪ್ಪವಾಗಿತ್ತು.

'ಮಕ್ಕಳಾದ ಮೇಲೆ ಹೆಂಗಸರು ಹಾಗೇ ಕಣೋ. ವೇಸ್ಟಾಗತ್ತೆ ಅಂತ ಎಲ್ಲವನ್ನೂ ತಿಂದು ತಿಂದು ಹೀಗಾಗಿದೀನಿ' ನಕ್ಕಳು.

ದಿವಾಕರ ನೋಡುತ್ತಾ ಕೂತಿದ್ದವನು ಎದ್ದು ಬಂದ. ನಳಿನಿಯೂ ಬಂದಳು.

'ಹೊರಡೋಣ್ವಾ?'

'ಹೇಗೂ ಸಿಕ್ಕಿದೀಯಲ್ಲ, ಬಾ. ಒಂದು ಜುಮುಕಿ ಆರಿಸು. ನಂಗೆ ಸೆಲೆಕ್ಟ್ ಮಾಡೋದು ತಪ್ಪುತ್ತೆ' ಅಶೋಕನೆಂದ.

ಮತ್ತೆ ಹೊರಬರುವ ಹೊತ್ತಿಗೆ ಜನ ಕಡಿಮೆಯಾಗಿದ್ದರು.

ರಸ್ತೆಯ ಬದಿಯಲ್ಲಿದ್ದ ಅಂಗಡಿಯಲ್ಲಿ ಒಂದೈದಾರು ಜೊತೆ ಜುಮುಕಿ ಆರಿಸಿ ಕೊಟ್ಟಳು. 'ಫೈನಲ್ ಸೆಲೆಕ್ಷನ್ ನೀನು ಮಾಡು' ಎಂದಳು.

'ಅಷ್ಟೂ ಇರಲಿ' ಅಂಗಡಿಯವನಿಗೆ ದುಡ್ಡು ಕೊಟ್ಟು ಜುಮುಕಿಯ ಕವರ್ ಪಡೆದ.

'ಸಿಗೋಣ ಕಣೋ, ಹೀಗೇ. ಈಗ ನಾವು ಕೂತು ಮಾತಾಡಿದರೆ ಯಾರೂ ಗಲಾಟೆ ಮಾಡೋರು ಇಲ್ಲ. ಯಾಕೆಂದರೆ ಮರಳಿ ಸೇರದಷ್ಟು ದೂರ ಬಂದಿದೀವಿ. ಹಾಗಾಗಿ ಆರಾಮಾಗಿ ಮಾತಾಡ್ಕೊಂಡಿರಬಹುದು. ಯಾರೂ ನಮ್ಮ ನಮ್ಮ ಮನೆಗೆ ಹೋಗಿ ಚಾಡಿ ಹೇಳೋರು ಇಲ್ಲ. ಅದೂ ಅಲ್ಲದೆ ಈಗ ನಮ್ಮ ಜಾತಿ, ಉದ್ಯೋಗ, ಸಂಬಳ ಕೂಡ ಯಾರಿಗೂ ಬೇಡ. ಆದರೆ ಮಾತಾಡುವಷ್ಟು ವ್ಯವಧಾನ, ಆಸಕ್ತಿ ನಮಗೇ ಇಲ್ಲ. ದಾರಿ ಬೇರೆಯಾಗಿದೆ. ವಾಪಸ್ ಬಂದ್ರೂ ಇದಕ್ಕಿಂತ ಜಾಸ್ತಿ ಆತ್ಮೀಯರಾಗಲು ಸಾಧ್ಯವಿಲ್ಲ. ಹೋಗಲಿ ಬಿಡು. ಯಾವಾಗಲಾದರೂ ಹೀಗೇ ಇದೇ ಜಾತ್ರೆಯಲ್ಲಿ ಸಿಗೋಣ. ನೆಕ್ಸ್ಟ್ ಸಿಗುವಾಗ ನಿನ್ನ ಜೊತೆ ನಿನ್ನ ಫ್ಯಾಮಿಲಿ ಇರಬೇಕು, ಆಯ್ತಾ' ದೇವಯಾನಿ ಜುಮುಕಿಯನ್ನು ಅಲ್ಲಾಡಿಸುತ್ತಾ ಕೂದಲನ್ನು ಕಿವಿಯ ಹಿಂದೆ ಸಿಕ್ಕಿಸಿದಳು.

'ಬಾಯ್ ಕಣೇ ಖುಷಿಯಾಗಿರು' ಜಾತ್ರೆಯ ಬೀದಿ ಮುಗಿದಿತ್ತು.

ಅವಳು ನಳಿನಿಯೊಂದಿಗೆ ಆಟೊ ಹತ್ತಿದಳು.

ಇವನು ಬೈಕು.

'ಅಲ್ಲೋ, ಅವಳ ಹತ್ರ ಯಾಕೆ ಸುಳ್ಳು ಹೇಳಿದೆ?'

ನಕ್ಕ, 'ಇನ್ನೇನು ಮಾಡ್ಲೋ, ಅವಳು ಖುಷಿಯಾಗಿದಾಳೆ. ಅದೇ ಉತ್ಸಾಹ ಇದೆ ಬದುಕಲ್ಲಿ. ಅವಳೆದುರು ನಾನು ಅವಳ ನೆನಪಿನಲ್ಲಿ ಒಂಟಿಯಾಗಿ ಬದುಕ್ತಿದೀನಿ ಅಂತ ಹೇಳೋಕೆ ಮನಸ್ಸು ಬರಲಿಲ್ಲ. ಅವಳನ್ನು ಮರೆತು ಬದುಕೋದ್ರಲ್ಲಿ ಸೋತುಬಿಟ್ಟೆ ಅನ್ನೋದನ್ನು ಅವಳಿಗೆ ಹೇಳೋಕೆ ಆಗಲಿಲ್ಲ. ಹೇಡಿ ಅಂದುಬಿಟ್ಟರೆ ? ಅನ್ನೋ ಭಯ ಕಾಡ್ತು ಕಣೋ.